
# ಅಪ್ಪ

■ ಸದಾಶಿವ್ ಸೊರಟೂರು



ಟ್ರೈನ್ ಬಂದು ನಿಂತರೆ ಸಾಕು ಗುಜು ಗುಜು ಸದ್ದಿನ ಹೆರಿಗೆಯಾಗಿಬಿಡುತ್ತದೆ. ಯಾರು ಯಾರನ್ನು ಗಮನಿಸುವ ಗೋಜಿಗೆ ಹೋಗುವುದಿಲ್ಲ. ಅವರವರ ಧಾವಂತ ಅವರವರಿಗೆ! ಅದರ ಮಧ್ಯೆ ಕಾಫಿ, ಚಾಯ್, ಇಡ್ಲಿಯವರು ಧ್ವನಿ ಮೀರಿ ಕೂಗಿದರೂ ಯಾರ ಕಿವಿಗೂ ಬೀಳದು. ಅಂತವುದರಲ್ಲಿ ಆ ಕಂದನನ್ನು ಯಾರು ಕಂಡಾರು? ಕಣ್ಣಿನಲ್ಲಿ ತುಂಬಿದ ಭಯ, ಭಯಕ್ಕೆ ಜೊತೆಯಾಗಿ ಸೋರುತ್ತಿರುವ ನೀರು. ಇಂತಹ ಜಗತ್ತನ್ನು ಮೊದಲ ಬಾರಿ ಕಂಡವನಂತೆ ಮದುರಿಕೊಂಡ ಹಾಗೆ ಕಾಣುತ್ತಿದ್ದ. ಕಕ್ಕಾಬಿಕ್ಕಿಯಾಗಿ ಬಿಕ್ಕಳಿಸುತ್ತಿದ್ದ. ಮಂದೆಯಿಂದ ತಪ್ಪಿಸಿಕೊಂಡು ಬಂದ ಕುರಿಯಂತಾಗಿದ್ದ.

ಬಟ್ಟೆಗಳು ಒಂದು ಮಟ್ಟಿಗೆ ಕೊಳೆಯಾಗಿದ್ದವು. ಹಾಕಿದ ಚಡ್ಡಿ ಸೊಂಟದಲ್ಲಿ ಕಷ್ಟಪಟ್ಟು ನಿಂತಿತ್ತು. ಗುಂಡಿ ಕಿತ್ತಿದಕ್ಕೆ ಉಡುದಾರ ಸಹಾಯ ಮಾಡಿತ್ತು. ಅಂಗಿಯ ಗುಂಡಿಯಲ್ಲಿ ಒಂದೆರಡು ಕಿತ್ತು ಹೋಗಿದ್ದವು. ಕೂದಲುಗಳು ಕೆದರಿದ್ದವು. ಸೂಟ್‌ಬೂಟ್, ಸಲ್ವಾರ್ ಕಮೀಜ್ ಮಂದಿಗಳು ಮುಂದೆ ಹಜ್ಜೆ ಹಾಕುತ್ತಿದ್ದರೂ ಆತನಿಗೆ ತನ್ನ ಬಟ್ಟೆ, ಸ್ಥಿತಿಯ ಪ್ರಜ್ಞೆಯೇ ಇರಲಿಲ್ಲ. ಅಳುವೊಂದನ್ನು ಅಂಟಿಸಿಕೊಂಡು ಬಂದವನಂತೆ ಬರೀ ಅಳುತ್ತಲೇ ಇದ್ದ. ಬೆದರಿದ ಹಾಗೆ ಆ ಕಡೆ ಈ ಕಡೆ ನೋಡಿದಂತಿತ್ತು. 'ಅಮ್ಮಾ.. ಅಮ್ಮಾ..' ಎನ್ನುವ ಕನವರಿಕೆ ಅಳುವಿನೊಂದಿಗೆ ಬೆರೆತು ಕಣ್ಣೀರಿನಂತೆಯೇ ಸರಾಗವಾಗಿ ಹರಿಯುತ್ತಿತ್ತು.

ಹುಡುಗ ಸಂಪೂರ್ಣ ಹೆದರಿಕೊಂಡಿದ್ದ. ತಾನೇ ತಪ್ಪಿಸಿಕೊಂಡುವನೊ? ಯಾರೋ ಕ್ರೂರ ಮನಸ್ಸಿನವರು ಬಿಟ್ಟು ಹೋದರೊ, ತನ್ನಷ್ಟಕ್ಕೆ ತಾನೇ ಹುಡುಗತನದಿಂದ ಕಳೆದು ಬಂದವನೊ ತಿಳಿಯುತ್ತಿಲ್ಲ. ರೈಲಿನಿಂದ ಆಚೆ ಬಂದ ಜಗತ್ತು ಕಿವುಡಾಗಿಯೇ ಸಾಗಿತ್ತು. ಈತ ಅದೇ ರೈಲಿನಿಂದ ಇಳಿಯಲ್ಪಟ್ಟವನೊ, ನಿಲ್ದಾಣಕ್ಕೆ ಹೊರ ಜಗತ್ತಿನಿಂದ ದಾರಿ ತಪ್ಪಿ ಬಂದವನೊ ಏನೊ ಒಂದು ಸೂಕ್ಷ್ಮ ಹೊಳವು ಕೂಡ ಹೊಳೆಯಲಿಲ್ಲ ನನಗೆ.

ನನ್ನ ಅನುಭವಕ್ಕೆ ಬಂದಂತೆ ಹೇಳುವುದಾದರೆ ನನ್ನ ರೈಲು ಪ್ರಯಾಣದ ಇತಿಹಾಸದಲ್ಲಿ ಸರಿಯಾದ ಸಮಯಕ್ಕೆ ರೈಲು ಬಂದಿದ್ದೆ ಇಲ್ಲ. ಮೈಕಿನಲ್ಲಿ ಅರಚುವ ಹುಡುಗಿ ಆಗಾಗ ಹತ್ತರಿಂದ ಇಪ್ಪತ್ತು ನಿಮಿಷ ಮುಂದಕ್ಕೆ ಹಾಕುತ್ತಲೇ ಇರುತ್ತಾಳೆ. ರಾತ್ರಿ ವೇಳೆಯಲ್ಲಿ ಅಲ್ಲಿ ಸೊಳ್ಳೆ ಕಾಟವನ್ನು ವಿಶೇಷವಾಗಿ ಹೇಳಬೇಕಾಗಿಲ್ಲ. ಕಾದು ಕುಳಿತುಕೊಂಡವನ ಅಂಡು ಉರಿಯುತ್ತಿತ್ತು. ಸಮಯ ಜೇಡಿ ಮಣ್ಣಿನೊಳಗೆ ಸಿಕ್ಕು ಒದ್ದಾಡುತ್ತಿದೆ ಏನೊ ಎಂದೆನಿಸಿತ್ತು.

ಅಕಸ್ಮಾತ್ ಕಣ್ಣಿಗೆ ಬಿದ್ದ ಆ ಹುಡುಗ ನನ್ನ ಸೆಳೆದು ಬಿಟ್ಟಿದ್ದ! ಕೈಯಲ್ಲಿಡದ ಯಾವುದೊ ಮ್ಯಾಗಜಿನ್ ಕಥೆಯ ಒಳಗೆ ಮುಳುಗಿ ಹೋಗುವುದರ ಬದಲು ಎದುರಿಗೆ ಮನುಷ್ಯತ್ವದ ಕಥೆ ಸಾಗುತ್ತಿದೆ ಅದರಲ್ಲಿ ಮುಳುಗು ಎನ್ನುವಂತೆ ಮನಸ್ಸು ಹೇಳಿದಂತೆ ಭಾಸವಾಯ್ತು. ಮ್ಯಾಗಜಿನ್ ಬ್ಯಾಗ್ ಸೇರಿತು. ಎಲ್ಲಾ